ದಿಃ **03-12-2022** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎಸ್.ಬಿ. ವಕೀಲರವರಿಂದಃ

**03.** **1985** ರಲ್ಲಿ ನಮ್ಮ ಮನೆತನದ ಆಸ್ತಿಯನ್ನು ಪಾಲು ವಿಭಾಗ ಮಾಡಿಕೊಂಡಾಗ ದಾಖಲೆಯನ್ನು ಮಾಡಿಕೊಂಡಿರುತ್ತೇವೆ ಮತ್ತು ಅದನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವಾ ಸ್ವತ್ತು ನಮಗೆ ಪಾಲು ವಿಭಾಗದಂತೆ ಬಂದಿದೆ ಎಂದು ವಾದ ಪತ್ರದಲ್ಲಿ ಬರೆಸಿದ ಬಗ್ಗೆ ನನಗೆ ನೆನಪು ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಪಾಲು ವಿಭಾಗದಂತೆ ದಾವಾ ಸ್ವತ್ತು ನನ್ನ ಪಾಲಿಗೆ ಬಂದ ಬಗ್ಗೆ ಬರೆಸಿರುತ್ತೇನೆ. ದಾವಾ ಸ್ವತ್ತು ನನ್ನ ಪಾಲಿಗೆ ಬಂದ ಬಗ್ಗೆ ಸುಮಾರು **22** ವರ್ಷಗಳಿಂದ ನನ್ನ ಮಾಹಿತಿಗೆ ಇರುತ್ತದೆ. ಪಾಲು ಪಟ್ಟಿಯ ದಿನಾಂಕದಿಂದ ದಾವಾ ಹಾಕುವವರೆಗೂ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಕಂದಾಯ ಅರ್ಜಿ ಅಥವಾ ನ್ಯಾಯಾಲಯದ ಮುಂದೆ ಸಲ್ಲಿಸಿರುವುದಿಲ್ಲ.

**04.** ನನ್ನ ತಂದೆ ತೀರಿಕೊಂಡು **30** ವರ್ಷಗಳಾಗಿರುತ್ತದೆ. ನನ್ನ ತಂದೆ ತೀರಿಕೊಂಡ ನಂತರ ಇಲ್ಲಿಯವರೆಗೂ ನಾನು ದಾವಾ ಸ್ವತ್ತಿನ ಸಂಬಂಧಿಸಿದಂತೆ ಯಾವುದೇ ಕಂದಾಯವನ್ನು ಕಟ್ಟಿರುವುದಿಲ್ಲ. ನಾನು ನನ್ನ ತಂದೆ ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದ ಬಗ್ಗೆ ಕಂದಾಯ ಅಧಿಕಾರಿಗಳಿಂದ ಸ್ವಾಧೀನ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಾನು ಸದ್ಯ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತೇನೆ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದ ಬಗ್ಗೆ ಯಾವುದೇ ಛಾಯಾ ಚಿತ್ರವನ್ನು ಹಾಜರುಪಡಿಸಿರುವುದಿಲ್ಲ.

**05.** ನನ್ನದು ಟ್ರಾಕ್ಟರ್ ಇರುವುದಿಲ್ಲ, ಕೇವಲ ವ್ಯವಸಾಯ ಇರುತ್ತದೆ. ಎತ್ತು ಕಟ್ಟಲು ನಮ್ಮ ಮನೆಯ ಮುಂದೆ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಎಲ್ಲಾ ಕೃಷಿ ಉಪಕರಣಗಳನ್ನು ಮನೆಯ ಮುಂದೆ ಇಟ್ಟುಕೊಂಡಿರುತ್ತೇವೆ. ಪ್ರತಿವಾದಿ ಮತ್ತು ಅವರ

ತಂದೆಯ ಬಗ್ಗೆ ನನಗೆ ತಿಳಿದಿರುತ್ತದೆ. ಪ್ರತಿವಾದಿ ಅವರ ಅಜ್ಜ ದೊಡ್ಡಬಸಪ್ಪ ಅವರ ಕಾಲದಿಂದಲೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ದನದ ಕೊಟ್ಟಿಗೆ ಇರುತ್ತದೆ. ದಾವಾ ಸ್ವತ್ತಿನ ಈಶಾನ್ಯದ ಕಡೆಗೆ ಶೌಚಾಲಯ ಇದೆ ಎಂದರೆ ಸರಿ. ಪಶ್ಚಿಮದ ಕಡೆಗೆ ದೊಡ್ಡ ತಿಪ್ಪಿನ ಗುಂಡಿ ಇದೆ ಎಂದರೆ ಸರಿ. ದಕ್ಷಿಣದ ಕಡೆಗೆ ಪ್ರತಿವಾದಿಯ ವಾಸದ ಮನೆ ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾನು ಶೌಚಾಲಯ ಕಟ್ಟಿಸಿದ ಬಗ್ಗೆ ನನ್ನ ಪ್ರಮಾಣ ಪತ್ರ ಮತ್ತು ವಾದ ಪತ್ರದಲ್ಲಿ ಹೇಳಿಲ್ಲ. ದನದ ಕೊಟ್ಟಿಗೆ ಇದ್ದ ಬಗ್ಗೆ ನನ್ನ ವಾದ ಪತ್ರದಲ್ಲಿ ಹೇಳಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ತಂದೆ ಮತ್ತು ಅಜ್ಜ ದನದ ಕೊಟ್ಟಿಗೆ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ದನದ ಕೊಟ್ಟಿಗೆಯನ್ನು ನಾನೇ **15** ವರ್ಷಗಳ ಹಿಂದೆ ಕಟ್ಟಿಸಿರುತ್ತೇವೆ. ಅದನ್ನು ಕಟ್ಟಿಸಲು ಗ್ರಾಮ ಪಂಚಾಯಿತಿಯಿಂದ ಪರವಾನಿಗೆ ಪಡೆದಿಲ್ಲ. ಶೌಚಾಲಯದ ಜಾಗದಲ್ಲಿ ಮೊದಲು ಒಂದು ಹಳೆಯ ಶೌಚಾಲಯ ಇತ್ತು ಎಂದರೆ ಸರಿಯಲ್ಲ.

**06.** ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಶೌಚಾಲಯ ಮತ್ತು ದನದ ಕೊಟ್ಟಿಗೆಯನ್ನು ಪಂಚಾಯಿತಿಯಿಂದ ಪರವಾನಿಗೆ ಪಡೆದು ಕಟ್ಟಿಸಿದ್ದಾರೆ ಎಂದರೆ ಪಂಚಾಯಿತಿಯವರು ಸುಳ್ಳಾಗಿ ಅನುಮತಿ ಕೊಟ್ಟಿದ್ದಾರೆ. ಪಂಚಾಯಿತಿಯ ನೈರ್ಮಲ್ಯ ಯೋಜನೆಯ ಅಡಿ ಪ್ರತಿಯೊಂದು ಮನೆ ಶೌಚಾಲಯ ನಿರ್ಮಿಸಿಕೊಡುತ್ತಾರೆ ಎಂದರೆ ಸರಿ. ಫಲಾನುಭವಿಗಳನ್ನು ಗುರುತಿಸಿ ಮನೆ ಮನೆಗೆ ಶೌಚಾಲಯ ಕಟ್ಟಿಸಿ ಕೊಡುತ್ತಾರೆ ಎಂದರೆ ಸರಿ. ಸ್ವಂತ ಜಾಗದಲ್ಲಿ ಶೌಚಾಲಯ ಕಟ್ಟಿಸಲು ಅನುಮತಿ ಕೊಡುತ್ತಾರೆ ಎಂದರೆ ಸರಿ. **2017** ರಲ್ಲಿ ನೈರ್ಮಲ್ಯ ಯೋಜನೆ ಅಡಿಯಲ್ಲಿ ಪ್ರತಿವಾದಿಯ ತಾಯಿಯ ಹೆಸರಿಗೆ ದಾವಾ ಸ್ವತ್ತಿನಲ್ಲಿ ಶೌಚಾಲಯ ನಿರ್ಮಿಸಲು ಪಂಚಾಯಿತಿವರು ಅನುಮತಿ ಕೊಟ್ಟು ಶೌಚಾಲಯ ಕಟ್ಟಿಸಿ ಕೊಟ್ಟಿದ್ದಾರೆ ಎಂದರೆ ನಾನು ಕಟ್ಟಿಸಿರುತ್ತೇನೆ. ನಾನು ಶೌಚಾಲಯ ಕಟ್ಟಿಸಿದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯ ತಾಯಿಯ ಹೆಸರಿನಲ್ಲಿ ಶೌಚಾಲಯ ಕಟ್ಟಿದ್ದಕ್ಕಾಗಿ ಸರ್ಕಾರದಿಂದ ಹಣ ಮಂಜೂರಾಗಿರುತ್ತದೆ ಎಂದರೆ ಇರಬಹುದು.

ಪ್ರತಿವಾದಿಯ ತಂದೆ ಯಾವ ಸುಳ್ಳು ದಾಖಲೆಯನ್ನು ಹಾಜರುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಯಾವುದೇ ಸುಳ್ಳು ದಾಖಲೆಯನ್ನು ಸೃಷ್ಟಿಸಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಕಾಲದಿಂದಲೂ ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ದನದ ಕೊಟ್ಟಿಗೆ, ತಿಪ್ಪಿ ಮತ್ತು ಶೌಚಾಲಯವನ್ನು ಕಟ್ಟಿಸಿ ಸುಮಾರು **50** ವರ್ಷಗಳಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಒಂದು ಹುಣಸೆ ಮರ ಇದೆ ಎಂದರೆ ಸರಿ. ಸದರಿ ಹುಣಸೆ ಮರವನ್ನು ಫಲವನ್ನು ಪ್ರತಿವಾದಿ ಪಡೆಯುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತು ಪ್ರತಿವಾದಿಯವರ ಆಸ್ತಿ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಮಾಲೀಕನಲ್ಲ ಮತ್ತು ನನಗೂ ಅದಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು-ವಿಚಾರಣೆಃಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

"ನನ್ನ ಸಮಕ್ಷಮ"

ಓ. ಹೇ. ಕೇ. ಸರಿ ಇದೆ

ಸಹಿ/-
(ಶ್ರೀ.ವೀರೇಶ್ ಕುಮಾರ್.ಸಿ.ಕೆ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.